ಘಟಪ್ರಭಾ ಎಡದಂಡೆ ಕಾಲುವೆಯಲ್ಲಿ ನೀರಿನ ಸಾಮರ್ಥ್ಯ

೪೨೧(೫೪೫) ಶ್ರೀ ಆರ್. ಎಂ. ಪಾಟೀಲ್ (ಅರಭಾವಿ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಘಟಪ್ರಭಾ ಎಡದಂಡೆ ಕಾಲುವೆಯ ನೀರಿನ ಸಾಮರ್ಥ್ಯ ಎಷ್ಟು ?

ಆ) ನೀರು ಹಾಯುವ ಕ್ಷೇತ್ರಕ್ಕೂ, ಕಾಲುವೆಯ ನೀರಿನ ಸಾಮರ್ಥ್ಯಕ್ಕೂ ಸರಿ ಹೊಂದುವುದೆ?

ಇ) ಹಾಗಿಲ್ಲದಿದ್ದಲ್ಲಿ ಸದರಿ ಕ್ಷೇತ್ರಕ್ಕೆ ಸರಿಯಾಗಿ ನೀರೊದಗಿಸಲು ಯಾವ ಯೋಜನೆ ಕೈಗೊಳ್ಳಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಮುಖ್ಯ ಮಂತ್ರಿಗಳು).—

ಅ) ಸದ್ಯಕ್ಕೆ ೨೦೦೦ ಕ್ಯೂಸೆಕ್ಸ್‌ಗಳು ಮತ್ತು ಲೈನಿಂಗ್ ಆದ ನಂತರ ೨೮೫೦ ಕ್ಯೂಸೆಕ್ಸ್‌ಗಳಿಗೆ ಹೆಚ್ಚಾಗುತ್ತದೆ.

ಆ) ಸದ್ಯಕ್ಕೆ ನೀರಾವರಿಯಾಗುವ ಕ್ಷೇತ್ರಕ್ಕೆ ಸರಿ ಹೊಂದುವುದು.

ಇ) ಲೈನಿಂಗ್ ಕೆಲಸವನ್ನು ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದ್ದು, ಪೂರ್ಣಗೊಂಡ ನಂತರ ೪ ಲಕ್ಷ ಎಕರೆಗೆ ನೀರಾವರಿ ಸೌಲಭ್ಯ ಒದಗಲಿದೆ.

ವರದಕ್ಷಿಣೆ ಕಾನೂನು ಉಲ್ಲಂಘನೆಗೆ ಒಳಗಾದ ಪ್ರಕರಣಗಳು.

೪೨೨(೩೦೯) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ರಾಜ್ಯದಲ್ಲಿ ವರದಕ್ಷಿಣೆ ಕಾನೂನಿಗೆ ವಿರುದ್ಧವಾಗಿ ನಡೆದ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಆ ಪ್ರಕರಣಗಳಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು?

ವರದಕ್ಷಿಣೆ ಕಿರುಕುಳದಿಂದ ಮೃತಪಟ್ಟಬಗ್ಗೆ ದಾಖಲಾದ ಪ್ರಕರಣಗಳ ಸಂಖ್ಯೆ
ವರದಕ್ಷಿಣೆ ಕಿರುಕುಳದಿಂದ ಸತ್ತವರ ಸಂಖ್ಯೆ
ವರದಕ್ಷಿಣೆ ಕಿರುಕುಳದ ಇನ್ನಿತರ ಅಪಾದನೆಗಳ ಬಗ್ಗೆ ದಾಖಲಾದ ಪ್ರಕರಣಗಳ ಸಂಖ್ಯೆ

ಆ) ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು). —

ಅ) ರಾಜ್ಯದಲ್ಲಿ ವರದಕ್ಷಿಣೆ ವಿರುದ್ಧ ನಡೆದ ಪ್ರಕರಣಗಳ ಸಂಖ್ಯೆ, ಸಾವಿಗೀಡಾದವರ ಸಂಖ್ಯೆ ಇತ್ಯಾದಿಗಳನ್ನು ೧೯೮೬ ರಿಂದ ೧೯೯೯ ಫೆಬ್ರವರಿ ೨೮ರ ವರೆಗೆ ಈ ಕೆಳಗೆ ಕೊಡಲಾಗಿದೆ.

೧೯೮೬	೧೯೮೭	೧೯೮೮	೧೯೮೯ (ಫೆಬ್ರವರಿ ೨೮ರ ವರೆಗೆ)
೬೫	೧೦೬	೧೮೨	೩೦
೬೫	೧೦೬	೧೩೨	
೩೫೯	೪೭೯	೫೯೧	

ವರದಕ್ಷಿಣೆ ಸಾವು, ಕಿರುಕುಳ ಇವುಗಳನ್ನು ತಡೆ ಗಟ್ಟಲು ಸರ್ಕಾರವು ಹಲವಾರು ಕ್ರಮ ಗಳನ್ನು ತೆಗೆದುಕೊಂಡಿದೆ.

ಇ) ೧೯೮೪ರ ವರದಕ್ಷಿಣೆ ನಿರೋಧ ಕಾಯಿದೆಯನ್ನು ೧೯೮೫ ಮತ್ತು ೧೯೮೬ರಲ್ಲಿ ತಿದ್ದುಪಡಿ ಮಾಡಿ ಅಪರಾಧಿಗಳಿಗೆ ತೀವ್ರ ತರದ ಹೆಚ್ಚಿನ ಶಿಕ್ಷೆ ವಿಧಿಸುವಂತೆ ಮಾಡಲಾಗಿದೆ.